ಶಿಕ್ಷಕರ ಕಾಳಜಿ ಮತ್ತು ಕಳಕಳಿಯಿಂದ ರೂಪಾಂತರಗೊಂಡ ಶಾಲೆ

ಸುನಿತಾ ಸುರೇಶ್‌ರಾವ್

ಮಕ್ಕಳಲ್ಲಿ ಯಾವುದೇ ರೀತಿಯ ಕಲಿಕೆಯನ್ನು ಸಕ್ರಿಯಗೊಳಿಸಲು ಮತ್ತು ಅವರ ಸಮಗ್ರ ಅಭಿವೃದ್ಧಿಗೆ ಕೊಡುಗೆ ನೀಡಲು ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಅನುಕೂಲಕರ ವಾತಾವರಣವು ಪೂರ್ವಾಪೇಕ್ಷಿತವಾಗಿದೆ. ಈ ಲೇಖನದಲ್ಲಿ ನಾನು ವಿಜಯಪುರದ ಕನ್ನಡ ಮಾಧ್ಯಮ ಗಂಡು ಮಕ್ಕಳ ಶಾಲೆಯ (Kannada Boys' School - KBS) ಮಕ್ಕಳ ಅನುಭವಗಳನ್ನು ಮತ್ತು ಅತ್ಯಂತ ಕಠಿಣ ಸಂದರ್ಭಗಳಲ್ಲಿ ಅವರಿಗೆ ಭಾವನಾತ್ಮಕ ಬೆಂಬಲವನ್ನು (emotional support) ನೀಡುವಲ್ಲಿ ಅವರ ಶಿಕ್ಷಕರ ಸೃಜನಶೀಲತೆ ಮತ್ತು ಸಕಾರಾತ್ಮಕ ಪ್ರಯತ್ನಗಳನ್ನು ಪ್ರಸ್ತುತಪಡಿಸಲು ಬಯಸುತ್ತೇನೆ. ಅಪರಾಧ ಆರೋಪಗಳು, ಮದ್ಯಪಾನ, ಪೋಷಕರ ಸಾವು, ಮತ್ತು ಪೋಷಕರು ಅವರನ್ನು ತೊರೆದು ಹೋಗುವುದು ಅಲ್ಲಿನ ಮಕ್ಕಳು ಎದುರಿಸುತ್ತಿರುವ ಕೆಲವು ಸಮಸ್ಯೆಗಳಾಗಿದ್ದು, ಇವು ಭಾವನಾತ್ಮಕವಾಗಿ ಅವರ ಮನಸ್ಸಿನಲ್ಲಿ ಆಳವಾದ ಗಾಯಗಳನ್ನು ಉಂಟು ಮಾಡುತ್ತವೆ. ಹೀಗಾಗಿ ಇಲ್ಲಿನ ಶಿಕ್ಷಕರು ಜಾಗರೂಕರಾಗಿರಬೇಕಾಗಿದ್ದು, ಕೇವಲ ಶೈಕ್ಷಣಿಕ ವಿಷಯಗಳಲ್ಲಿ ಬೆಂಬಲಿಸುವುದು ಮಾತ್ರವಲ್ಲದೆ, ಅವರು ಪ್ರಬುದ್ಧರಾಗಿ, ಸ್ವತಂತ್ರರಾಗಿ ಬೆಳೆಯಲು ಮಕ್ಕಳ ಮನಸ್ಸಿನ ಭಾವನೆಗಳನ್ನು ಅರ್ಥ ಮಾಡಿಕೊಂಡು ಅವರಿಗೆ ಅಗತ್ಯವಿರುವ ಭಾವನಾತ್ಮಕ ಬೆಂಬಲವನ್ನು ಸಹ ನೀಡಬೇಕಾಗುತ್ತದೆ.

ಮಕ್ಕಳ ಹಿನ್ನೆಲೆ ಮತ್ತು ಸಂದರ್ಭ

ವಿಜಯಪುರದ (ಮೊದಲು ಬಿಜಾಪುರ ಎಂದು ಕರೆಯಲಾಗುತ್ತಿತ್ತು) ಬಹುಪಾಲು ಜನರು, ಕೃಷಿಯನ್ನು ಅವಲಂಬಿಸಿದ್ದಾರೆ. ಆದರೆ, ಸಕಾಲಕ್ಕೆ ಮಳೆಯಾಗದ ಕಾರಣ ಜೀವನೋಪಾಯ ಅರಸಿ ಅವರು ಬೇರೆ ಜಿಲ್ಲೆಗಳಿಗೆ ವಲಸೆ ಹೋಗುವಂತಾಗಿದೆ. ಜೀವನೋಪಾಯ ಅರಸಿ ಈ ಊರಿಗೆ ವಲಸೆ ಬಂದಿರುವ ಅನ್ಯ ರಾಜ್ಯಗಳ ಜನರು ಸಣ್ಣಪುಟ್ಟ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಹೀಗಾಗಿ ರೈಲು ನಿಲ್ದಾಣದ ಬಳಿ ಇರುವ ಶಾಲೆಗೆ ನಗರದ ವಿವಿಧೆಡೆಯಿಂದ ಹಲವಾರು ಮಕ್ಕಳು ಬರುತ್ತಿದ್ದಾರೆ. ಅವರಲ್ಲಿ ಅನೇಕರು ತಮ್ಮ ಪೋಷಕರಿಂದ ನಿರ್ಲಕ್ಷಿಸಲ್ಪಟ್ಟಿದ್ದಾರೆ ಜೊತೆಗೆ, ಅವರಲ್ಲಿ ಹೆಚ್ಚಿನವರು ಏಕ ಪೋಷಕರಿಂದ (single parent) ಬೆಳೆಸಲ್ಪಡುತ್ತಿದ್ದಾರೆ. ಪೋಷಕರು, ತಮ್ಮ ಮಕ್ಕಳನ್ನು ನೋಡಿಕೊಳ್ಳುವ ಕೆಲಸದಿಂದ ಕೆಲವು ಗಂಟೆಗಳ ಕಾಲ ಬಿಡುವು ಸಿಗುವುದರಿಂದ ಆ ಸಮಯವನ್ನು ದೈನಂದಿನ ಕೂಲಿಗಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬುವುದೂ ಸೇರಿದಂತೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಲವು ಕಾರಣಗಳನ್ನು ಅವರು ಹೊಂದಿದ್ದಾರೆ. ಶಾಲೆಯಲ್ಲಿದ್ದಾಗ ಮಕ್ಕಳಿಗೆ ಕನಿಷ್ಠ ಒಂದು ಹೊತ್ತಿನ (ಮಧ್ಯಾಹ್ನದ ಊಟ) ಊಟವಾದರೂ ದೊರಕುತ್ತದೆ ಎಂಬ ಭರವಸೆಯ ಅಂಶವನ್ನೂ ಇದು ಒಳಗೊಂಡಿದೆ.

ಮೊದಲೇ ಆರ್ಥಿಕ ತೊಂದರೆಗಳನ್ನು ಎದುರಿಸುತ್ತಿದ್ದ ಈ ಸಮುದಾಯಗಳು ಸಾಂಕ್ರಾಮಿಕ ರೋಗದಿಂದ ಮತ್ತಷ್ಟು ತೀವ್ರವಾಗಿ ತತ್ತರಿಸಿವೆ. ಈ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಬೇರೆಬೇರೆ ಕುಟುಂಬಗಳಿಗೆ ಸೇರಿದ ಇಬ್ಬರು ಮಕ್ಕಳು ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ ತಮ್ಮ ತಾಯಿಯನ್ನು ಕಳೆದುಕೊಂಡಿದ್ದಾರೆ. ಅದರಲ್ಲಿ ಒಂದು ಮಗುವಿನ ಕುಟುಂಬವು ಒಂದರಿಂದ ಐದನೇ ತರಗತಿಯವರೆಗೆ ಓದುತ್ತಿರುವ ನಾಲ್ಕು ಮಕ್ಕಳನ್ನು ಒಳಗೊಂಡಿದೆ. ಅವರ ತಂದೆ ದಿನಗೂಲಿ ಕೆಲಸಗಾರರಾಗಿದ್ದು, ಪ್ರತಿ ರಾತ್ರಿ ಕುಡಿದು ತಡವಾಗಿ ಮನೆಗೆ ಬರುತ್ತಾರೆ. ಅವರು ತನ್ನ ಮಕ್ಕಳ ಬಗ್ಗೆ ಕಾಳಜಿ ವಹಿಸುವುದಿಲ್ಲ. ಮಕ್ಕಳು ತುಂಬಾ ಚಿಕ್ಕವರಾಗಿದ್ದು, ಅವರಿಗೆ ಆಹಾರ, ಸ್ನಾನ ಮತ್ತು ಬಟ್ಟೆ ತೊಡಿಸಲು ಬೇರೆಯವರ ಸಹಾಯ ಬೇಕಾಗಿದೆ.

ಅವರು ಹರಿದ ಕೊಳಕು ಬಟ್ಟೆಯನ್ನು ಧರಿಸಿ, ಬೆಳಗಿನ ಉಪಾಹಾರವನ್ನೂ ಸೇವಿಸದೆ ಶಾಲೆಗೆ ಬರುತ್ತಿದ್ದರು. ಸಾಂಕ್ರಾಮಿಕದ ಸಮಯದಲ್ಲಿ ಅವರ ಪರಿಸ್ಥಿತಿ ತುಂಬ ಶೋಚನೀಯವಾಗಿತ್ತು. ತಂದೆಗೆ ಕೆಲಸವಿಲ್ಲದ ಕಾರಣ ಮತ್ತು ಶಾಲೆಯನ್ನು ಮುಚ್ಚಿದ್ದರಿಂದ ಮಕ್ಕಳಿಗೆ ದಿನದಲ್ಲಿ ಒಂದು ಹೊತ್ತಿನ ಊಟವೂ ಸಿಗುತ್ತಿರಲಿಲ್ಲ. ಇನ್ನೊಂದು ಮಗುವಿಗೆ ನರ್ಸರಿ ತರಗತಿಯಲ್ಲಿ ಕಲಿಯುತ್ತಿರುವ ಸಹೋದರಿ ಇದ್ದಾಳೆ. ಅವರ ತಂದೆ ಅವರನ್ನು ನೋಡಿಕೊಳ್ಳುತ್ತಿದ್ದರೂ, ಮಗು ತನ್ನ ಚಿಕ್ಕ ತಂಗಿಯನ್ನು ಶಾಲೆಗೆ ಕರೆತರಬೇಕು ಮತ್ತು ಅವನು ಇಡೀ ದಿನ ಶಾಲೆಯಲ್ಲಿ ಅವಳೊಂದಿಗೆ ಇರಬೇಕಾಗುತ್ತದೆ.

ಇಂತಹ ನಿರ್ಲಕ್ಷ್ಯ, ಸರಿಯಾದ ಕಾಳಜಿ ಮತ್ತು ಬೆಂಬಲದ ಕೊರತೆಯಿಂದಾಗಿ ಮಕ್ಕಳು ಶಾಲೆಯಲ್ಲಿ ಕಲಿಯಲು ಸಾಧ್ಯವಾಗುತ್ತಿಲ್ಲ. ಜೀವನೋಪಾಯವನ್ನು ಕಳೆದುಕೊಳ್ಳುವಿಕೆ, ಮದ್ಯಪಾನ ಮತ್ತು ಏಕ ಪೋಷಕತ್ವ ಮುಂತಾದವು ಮಕ್ಕಳ ಮೇಲೆ ಆಳವಾದ ಪ್ರಭಾವವನ್ನು ಬೀರುವ ಹಲವಾರು ಅಂಶಗಳಲ್ಲಿ ಕೆಲವಾಗಿವೆ.

ಶಿಕ್ಷಕರ ಪ್ರಯತ್ನ

ಶಾಲೆಯಲ್ಲಿ ಒಂದರಿಂದ ಏಳನೇ ತರಗತಿಯವರೆಗೆ 81 ಮಕ್ಕಳಿದ್ದು, ಹೆಚ್ಚಿನ ಮಕ್ಕಳು ಇದೇ ರೀತಿಯ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಈ ಮಧ್ಯೆ ಶಾಲೆಯ ಮೂವರು ಶಿಕ್ಷಕರು ಈ ಪರಿಸ್ಥಿತಿಯನ್ನು ನಿಭಾಯಿಸಲು ಮಾರ್ಗಗಳನ್ನು ಕಂಡು-ಕೊಂಡರು. ಅವರೆಲ್ಲರೂ ಮಕ್ಕಳ ಬಗ್ಗೆ ಕಾಳಜಿ ಮತ್ತು ಕಳಕಳಿಯನ್ನು ಹೊಂದಿದ್ದರಿಂದ ಅವರು ತಮ್ಮ ತರಗತಿಯ ಮಕ್ಕಳ ಹಿನ್ನೆಲೆಯನ್ನು ಚೆನ್ನಾಗಿ ಅರಿತುಕೊಂಡಿದ್ದರು. ಮೂವರು ಶಿಕ್ಷಕರು - ಒಬ್ಬರು ನಲಿ-ಕಲಿ ತರಗತಿಯನ್ನು, ಇನ್ನೊಬ್ಬರು ನಾಲ್ಕನೇ ಮತ್ತು ಐದನೇ ತರಗತಿಯನ್ನು ಮತ್ತೊಬ್ಬರು ಆರು ಮತ್ತು ಏಳನೇ ತರಗತಿಯನ್ನು ಮಕ್ಕಳ ಕಲಿಕೆ ಮತ್ತು ಸರ್ವತೋಮುಖ ಬೆಳವಣಿಗೆಯ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸುವ ತಂಡವಾಗಿ ಹಗಲಿರುಳು ಕೆಲಸ ಮಾಡಿದರು. ಉದ್ಯೋಗ ನಷ್ಟ ಮತ್ತು ಸಾವುಗಳು ಬಡತನಕ್ಕೆ ಕಾರಣವಾದಾಗ, ಶಿಕ್ಷಕರು ಮೊದಲ ಹಂತವಾಗಿ ಈ ಕುಟುಂಬಗಳಿಗೆ ಪಡಿತರವನ್ನು ನೀಡುವಲ್ಲಿ ಸಹಾಯ ಮಾಡಿದರು.

ಅವರು ಶಾಲೆಯಲ್ಲಿ ಮತ್ತು ಮಕ್ಕಳಿಗೆ ಕಲಿಸುವ ವಿಧಾನಗಳಲ್ಲಿ ಕೆಲವು ಬದಲಾವಣೆಗಳನ್ನು ತರಲು ಕ್ರಮಗಳನ್ನು ತೆಗೆದುಕೊಂಡರು. ಉದಾಹರಣೆಗೆ, ಇಬ್ಬರು ಮಕ್ಕಳಿರುವ ಕುಟುಂಬದಲ್ಲಿ, ಒಬ್ಬರು ಮೂರನೇ ತರಗತಿಯಲ್ಲಿ ಓದುತ್ತಿದ್ದರೆ, ಆ ವೇಳೆಯಲ್ಲಿ 4 ವರ್ಷದ ಇನ್ನೊಂದು ಮಗುವನ್ನು ಶಾಲೆಯ ಸಿಬ್ಬಂದಿ ನೋಡಿಕೊಂಡರು. ಈ ಕುಟುಂಬವು ತಮ್ಮ ಮಕ್ಕಳನ್ನು ನಿಯಮಿತವಾಗಿ ಶಾಲೆಗೆ ಕಳುಹಿಸುತ್ತಿದೆ ಎಂಬುದು ಪ್ರಶಂಸನೀಯವಾಗಿದೆ, ಆದರೆ ಎರಡೂ ಮಕ್ಕಳನ್ನು ಶಾಲೆಗೆ ಕಳುಹಿಸುವುದು ಸಮಸ್ಯೆಯನ್ನು ಪ್ರಸ್ತುತಪಡಿಸುತ್ತದೆ. ಇನ್ನೊಂದು ಪ್ರಕರಣದಲ್ಲಿ ತಾಯಿಯನ್ನು ಕಳೆದುಕೊಂಡ ಇಬ್ಬರು ಮಕ್ಕಳು ಬೆಳಗಿನ ಉಪಾಹಾರವನ್ನೂ ಮಾಡದೆ ಶಾಲೆಗೆ ಬರುತ್ತಿದ್ದರು. ಅವರು ಅಸ್ತವ್ಯಸ್ತವಾಗಿ, ಕೂದಲು ಕೆದರಿಕೊಂಡು ಮತ್ತು ಶಾಲೆಯ ಶಿಸ್ತನ್ನು ಅನುಸರಿಸದೆ ಬರುತ್ತಿದ್ದರು. ಹಿರಿಯ ಮಕ್ಕಳಿಗೆ ತಮ್ಮ ಕೂದಲನ್ನು ಬಾಚಿಕೊಳ್ಳುವ ಮತ್ತು ಎಣ್ಣೆ ಹಚ್ಚಿಕೊಳ್ಳುವ ಜವಾಬ್ದಾರಿಯನ್ನು ನೀಡಲಾಯಿತು ಮತ್ತು ಶಿಕ್ಷಕರು ಎಣ್ಣೆ, ಬಾಚಣಿಗೆ ಮತ್ತು ಕನ್ನಡಿಯನ್ನು ಒದಗಿಸಿದರು. ಮಕ್ಕಳಿಗೆ ಸರಿಯಾದ ಬಟ್ಟೆ ಇರಲಿಲ್ಲ, ಆದರೆ ಶಾಲೆಯವರು ನೀಡಿದ ಸಮವಸ್ತ್ರ ಅದಕ್ಕೆ ನೆರವಾಯಿತು. ತಮ್ಮ ಎಲ್ಲಾ ವೈಯಕ್ತಿಕ ಸಮಸ್ಯೆಗಳ ನಡುವೆಯೂ ಶಿಕ್ಷಕರ ನಿರಂತರ ಪ್ರೋತ್ಸಾಹದಿಂದಾಗಿ ಪ್ರಸಕ್ತ ವರ್ಷದಲ್ಲಿ ಮಕ್ಕಳು ಹಿಂದಿನ ಎರಡು ತರಗತಿಗಳ ಕಲಿಕೆಯ ಫಲಿತಾಂಶಗಳನ್ನು ಉತ್ತಮವಾಗಿ ಪಡೆಯಲು ಸಾಧ್ಯವಾಯಿತು. ಪ್ರತಿಯೊಬ್ಬ ಮಗುವಿಗೆ 'ಪ್ರತಿಯೊಬ್ಬರಿಗೂ ಅವರ ಸಾಮರ್ಥ್ಯದ ಪ್ರಕಾರ' ವಿಧಾನದ ಮೂಲಕ ಕಲಿಸಲಾಗುತ್ತಿರುವುದರಿಂದ, ತರಗತಿಯಲ್ಲಿರುವ ಹೆಚ್ಚಿನ ಮಕ್ಕಳು ವೇಗವಾಗಿ ಕಲಿಯುವವರಾಗುತ್ತಿದ್ದಾರೆ ಎಂಬುದನ್ನು ಗಮನಿಸಲಾಗಿದೆ. ಈ ಮೂವರು ಶಿಕ್ಷಕರು ಸುಧಾರಿತ ಕಲಿಕಾ ಫಲಿತಾಂಶಗಳ ಬಗ್ಗೆ ತಿಳಿದಿರುವುದರಿಂದ, ಬೋಧನಾ ವಿಧಾನದಂತಹ ಪೂರಕ ಅಭ್ಯಾಸಗಳನ್ನು ಅವರ ತರಗತಿಯ ಪ್ರಕ್ರಿಯೆಗಳಲ್ಲಿ ಗಮನಿಸಬಹುದು. ಪರಿಣಾಮಕಾರಿ ಕಲಿಕೆಗಾಗಿ ಶಿಕ್ಷಕರು ಬೋಧನಾ ಕಲಿಕಾ ಸಾಮಗ್ರಿ (TLM)ಗಳನ್ನು ತಯಾರಿಸುತ್ತಾರೆ ಮತ್ತು ಬಳಸುತ್ತಾರೆ (ಚಿತ್ರಗಳು 1-3).

ಭಾವನಾತ್ಮಕ ಬೆಂಬಲವನ್ನು ಖಾತರಿಪಡಿಸುವುದು

ನಲಿ - ಕಲಿ ತರಗತಿಯಲ್ಲಿ ಓದುತ್ತಿದ್ದ ತಾಯಂದಿರನ್ನು ಕಳೆದುಕೊಂಡಿದ್ದ ಮೂವರು ಮಕ್ಕಳು, ಆರಂಭದಲ್ಲಿ ತಮ್ಮ ಕಲಿಕೆಗೆ ಸಂಬಂಧಿಸಿದಂತೆ ಶಿಕ್ಷಕರು ಏನಾದರೂ ಕಟುವಾಗಿ ಹೇಳಿದರೆ ತಾಯಿಯನ್ನು ನೆನೆದು ಕಣ್ಣೀರು ಸುರಿಸುತ್ತಿದ್ದರು. ಹಾಗಾಗಿ, ಶಿಕ್ಷಕರು ಅವರೊಂದಿಗೆ ಮೃದುವಾಗಿ ವರ್ತಿಸಲು, ವೈಯಕ್ತಿಕ ಗಮನವನ್ನು ನೀಡಲು ಮತ್ತು ಕಾಳಜಿಯನ್ನು ತೋರಿಸಲು ಹೆಚ್ಚಿನ ಮುತುವರ್ಜಿ ವಹಿಸಿದರು. ಪುಸ್ತಕಗಳನ್ನು ಖರೀದಿಸಲು ಸಾಧ್ಯವಾಗದಂತಹ ಹಾಗೂ ಮಕ್ಕಳಅಗತ್ಯಗಳನ್ನು ನೋಡಿಕೊಳ್ಳಲು ಸಾಧ್ಯವಾಗದ ಪೋಷಕರನ್ನು ಗುರುತಿಸಿ ಎಲ್ಲಾ ರೀತಿಯ ಪರಿಸ್ಥಿತಿಗಳನ್ನು ಎದುರಿಸಲು ಶಿಕ್ಷಕರು ಅವರಿಗೆ ದಯೆ, ತಾಳ್ಮೆಯಿಂದ ಚಿಕ್ಕ ಸಾಧನೆಗೂ ಉತ್ಸಾಹ ಮತ್ತು ಮೆಚ್ಚುಗೆಯನ್ನು ನೀಡುವ ಮೂಲಕ ಕಲಿಕೆಗೆ ಪೂರಕ ವಾತಾವರಣವನ್ನು ನಿರ್ಮಿಸಿದರು. ಕಲಿಕೆಯಲ್ಲಿ ಸಾಧಿಸಿದ ಬದಲಾವಣೆಗಳು ಮತ್ತು ಪ್ರಗತಿಗೆ ಶಿಕ್ಷಕರು - ಮಕ್ಕಳು ಮತ್ತು ಪೋಷಕರೊಂದಿಗೆ ಹೊಂದಿರುವ ಉತ್ತಮ ಸಂವಹನ, ಚಟುವಟಿಕೆ ಆಧಾರಿತ ಕಲಿಕೆ, ಪ್ರತಿ ಮಗುವಿನ ಕಲಿಕೆಯ ಮಟ್ಟವನ್ನು ಆಧರಿಸಿ ಬೋಧನೆ-ಕಲಿಕೆ ಪ್ರಕ್ರಿಯೆ ಮತ್ತು ಮಕ್ಕಳನ್ನು ಗೌರವದಿಂದ ನಡೆಸಿಕೊಳ್ಳುವುದು ಮತ್ತು ಪ್ರೀತಿಗಳೇ ಕಾರಣವಾಗಿವೆ.

ಹಾಜರಾತಿ ಮತ್ತು ಮನೆ ಭೇಟಿ

ನಿಯಮಿತ ಹಾಜರಾತಿ ಬಹಳ ಮುಖ್ಯವಾಗಿದ್ದು, ಆ ಮೂಲಕ ಯಾವುದೇ ಮಗು ಸತತ ಮೂರು ದಿನಗಳವರೆಗೆ ಗೈರುಹಾಜರಾದರೆ, ಶಿಕ್ಷಕರು ವೈಯಕ್ತಿಕವಾಗಿ ಪೋಷಕರಿಗೆ ಕರೆ ಮಾಡಿ ಮಗುವಿನ ಬಗ್ಗೆ ವಿಚಾರಿಸುತ್ತಾರೆ. ಇದು ಶಿಕ್ಷಕರಿಗೆ ಮಕ್ಕಳ ಬಗ್ಗೆ ಕಾಳಜಿ ಇದೆ ಎಂಬುದನ್ನು ಪೋಷಕರಿಗೆ ಮನವರಿಕೆಮಾಡಿಸಿದೆ.

ಪ್ರತಿ ತಿಂಗಳು ಅಥವಾ ಎರಡು ತಿಂಗಳಿಗೊಮ್ಮೆ ಪೋಷಕರೊಂದಿಗೆ ಸಭೆ ನಡೆಸಲಾಗುತ್ತದೆ, ಅಲ್ಲಿ ಮಗುವಿನ ಕಾರ್ಯಕ್ಷಮತೆಯನ್ನು ಚರ್ಚಿಸಲಾಗುತ್ತದೆ. ಪೋಷಕರು ಸಭೆಗೆ ಗೈರುಹಾಜರಾಗಿದ್ದರೆ, ಆ ಮನೆಗೆ ಭೇಟಿ ನೀಡಲಾಗುತ್ತದೆ ಮತ್ತು ಮಗುವಿನ ಕಾರ್ಯಕ್ಷಮತೆಯನ್ನು ಪೋಷಕರೊಂದಿಗೆ ಚರ್ಚಿಸಲಾಗುತ್ತದೆ, ಇದರಿಂದ ಮಗು ಅಧ್ಯಯನದಲ್ಲಿ ತೊಡಗಿಸಿ ಕೊಳ್ಳುವಂತೆ ಮಾಡಿದಂತಾಗುತ್ತದೆ.

ಹೊಸ ಮಗು ದಾಖಲಾದಾಗ, ಶಿಕ್ಷಕರು ಕುಟುಂಬದ ಹಿನ್ನೆಲೆಯ ಬಗ್ಗೆ ತಿಳಿದುಕೊಳ್ಳುತ್ತಾರೆ, ಹೀಗಾಗಿ ಮಗು ತರಗತಿಗೆ ಹೊಂದಿಕೊಳ್ಳಲು ಮತ್ತು ತರಗತಿಯಲ್ಲಿ ಉಳಿದ ಮಕ್ಕಳು ಅವರನ್ನು ಒಪ್ಪಿಕೊಳ್ಳಲು ಸಹಾಯ ಮಾಡುತ್ತದೆ.


ಶಿಸ್ತು

ಮಕ್ಕಳು ಒಮ್ಮೆ ಶಾಲಾ ಆವರಣವನ್ನು ಪ್ರವೇಶಿಸಿದ ಮೇಲೆ, ಶಾಲೆಯ ಸಮಯ ಮುಗಿದ ನಂತರವೇ ಅವರನ್ನು ಮನೆಗೆ ಬಿಡಲು ಅನುಮತಿಸಲಾಗುತ್ತದೆ. ಶಾಲೆಯಾದ್ಯಂತ ಸ್ವಚ್ಛತೆಯನ್ನು ಕಾಪಾಡಲಾಗಿದೆ. ಶೌಚಾಲಯಗಳಿಗೆ ಸಾಕಷ್ಟು ನೀರನ್ನು ಒದಗಿಸಿರುವುದರಿಂದ ಮತ್ತು ವಿದ್ಯಾರ್ಥಿಗಳು ಅದನ್ನು ಸಮರ್ಪಕವಾಗಿ ಬಳಸುವುದರಿಂದ, ಅವುಗಳನ್ನು ಉತ್ತಮವಾಗಿ ನಿರ್ವಹಿಸಲಾಗುತ್ತದೆ ಮತ್ತು ಸ್ವಚ್ಛವಾಗಿ ಇರಿಸಲಾಗುತ್ತದೆ. ಮಧ್ಯಾಹ್ನದ ಬಿಸಿಯೂಟದ ಯೋಜನೆಯಡಿ ನೀಡುವ ಆಹಾರವನ್ನು ಮಕ್ಕಳು ವ್ಯರ್ಥ ಮಾಡುವುದಿಲ್ಲ.

ಇತರ ವಿಧಾನಗಳು

ಎಲ್ಲಾ ಶಿಕ್ಷಕರು ಸಮನ್ವಯದಿಂದ ಕೆಲಸ ಮಾಡುತ್ತಾರೆ ಮತ್ತು ಪರಸ್ಪರರಿಂದ ಕಲಿಯಲು ಹಿಂಜರಿಯುವುದಿಲ್ಲ. ಅವರು ತರಗತಿಯ ಕಲಿಕಾ ಸಾಮಗ್ರಿಗಳು ಮತ್ತು ಇತರೆ ಸಂಪನ್ಮೂಲಗಳನ್ನು ಸಹ ಹಂಚಿಕೊಳ್ಳುತ್ತಾರೆ. ಅವರು ಶಾಲೆಯಲ್ಲಿನ ಕಾರ್ಯಕ್ರಮಗಳು ಮತ್ತು ಸೌಲಭ್ಯಗಳ ಉದ್ದೇಶ ಮತ್ತು ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದು, ಹಾಗೂ ಅವುಗಳ ಸರಿಯಾದ ಅನುಷ್ಠಾನ ಮತ್ತು ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುತ್ತಾರೆ. ಶಿಕ್ಷಕರ ಪ್ರಕಾರ, ಊಟ, ಹಾಲು, ಬಾಳೆಹಣ್ಣು, ಕಡಲೆಕಾಯಿ ಮಿಠಾಯಿ/ಚಿಕ್ಕಿ ಮತ್ತು ಮೊಟ್ಟೆಗಳನ್ನು ನೀಡುವುದು ಮಕ್ಕಳಲ್ಲಿ ಶಕ್ತಿ ಮತ್ತು ಉತ್ಸಾಹದ ಮಟ್ಟವನ್ನು ಹೆಚ್ಚಿಸಿದೆ.

ಶಾಲೆ ಮತ್ತು ಸಮುದಾಯವು ಮಕ್ಕಳ ಕಲಿಕೆಯ ಸಾಧನೆಗಳು ಮತ್ತು ಬದಲಾವಣೆಗಳನ್ನು ಪ್ರಶಂಸಿಸಲು ಮತ್ತು ಗೌರವಿಸಲು ಪ್ರಾರಂಭಿಸಿದೆ. ಇದಕ್ಕೆ ಮುಖ್ಯ ಕಾರಣ ಮಕ್ಕಳನ್ನು ಅರ್ಥಮಾಡಿಕೊಳ್ಳುವ ಮನೋಭಾವದಲ್ಲಿ ಬದಲಾವಣೆ ಮತ್ತು ಕಲಿಕೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸುವ ಮೂಲಕ ಅವರಲ್ಲಿ ಸರ್ವತೋಮುಖ ಅಭಿವೃದ್ಧಿಯನ್ನು ತರಲು ಸಕ್ರಿಯವಾಗಿ ಶ್ರಮಿಸುತ್ತಿರುವುದು. ನಾವು ಮಕ್ಕಳನ್ನು ನೋಡುವ, ಸಂಬೋಧಿಸುವ ಮತ್ತು ನಡೆಸಿಕೊಳ್ಳುವ ರೀತಿ ಅವರ ಕಲಿಕೆಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದಕ್ಕೆ ಈ ಶಾಲೆಯು ಅತ್ಯುತ್ತಮ ಉದಾಹರಣೆಯಾಗಿದೆ.



ಚಿತ್ರ 1. 1-100 ಸಂಖ್ಯೆಯ ಚಾರ್ಟ್‌ಗಳಲ್ಲಿ ಕೆಲವು ನಿರ್ದಿಷ್ಟ ಸಂಖ್ಯೆಯ ಗುಣಕಗಳನ್ನು ಗುರುತಿಸುವುದು



ಚಿತ್ರ 2. ಸ್ಕೇಲ್ ಅಥವಾ ಸಂಖ್ಯೆಯ ರೇಖೆಯನ್ನು ಬಳಸಿಕೊಂಡು ಎರಡು ಸಂಖ್ಯೆಗಳ ಲಸಾಅ (LCM)ವನ್ನು ಕಂಡುಹಿಡಿಯುವುದು



ಚಿತ್ರ 3. 1-100 ಸಂಖ್ಯೆಯ ಚಾರ್ಟ್‌ಗಳಲ್ಲಿ 3,8 ಮತ್ತು 12 ಸಂಖ್ಯೆಯ ಗುಣಕಗಳನ್ನು ಗುರುತಿಸುವುದು



ಸುನಿತಾ ಸುರೇಶರಾವ್ ಅವರು ಕರ್ನಾಟಕದ ವಿಜಯಪುರದಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಜಿಲ್ಲಾ ಸಂಯೋಜಕರಾಗಿದ್ದಾರೆ. ಅವರು ಈ ಹಿಂದೆ ಮಾನವ ಸಂಪನ್ಮೂಲ ಮತ್ತು ಯುವ ನಾಯಕತ್ವ ಅಭಿವೃದ್ಧಿ ಕ್ಷೇತ್ರಗಳಲ್ಲಿ ವಿವಿಧ ಮಾನವ ಅಭಿವೃದ್ಧಿ ಏಜೆನ್ಸಿಗಳೊಂದಿಗೆ ಕೆಲಸ ಮಾಡಿದ್ದಾರೆ. ಪ್ರಯಾಣ ಮತ್ತು ಸಂಗೀತ ಕೇಳುವುದು ಅವರ ನೆಚ್ಚಿನ ಹವ್ಯಾಸಗಳಾಗಿವೆ. ಅವರನ್ನು sunita@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಶ್ರೀನಿಧಿ ಅಡಿಗ** | ಪರಿಶೀಲನೆ: **ಲತಾ ಕೆ.ಸಿ.**